



No.MAG(3)/NPP/98/2023-2024
No.MAG(3)/NPP/99/2023-2024

ಸ್ಥಾಪನೆ : ೧೯೭೯

# ಹೊಂಗನಸು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೨೩

| ಸಂಪುಟ: ೧೩ ಸಂಚಿಕೆ: ೧೧<br>Volume: 13 Issue: 11 | ಫೆಬ್ರವರಿ ೨೦೨೬<br>February 2026 | ಪುಟಗಳು-೮<br>Pages-8 | ವಾರ್ಷಿಕ ಚಂದಾ ರೂ.೨೦/-<br>Annual Subscription Rs.20/- | ಶ್ರೀ ವಿಶ್ವಾವಸು ಸಂವತ್ಸರ<br>ಮಾಘ-ಫಾಲ್ಗುಣ ಮಾಸ |
|---|---|---|---|---|

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂರಕ್ಷರು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕರು**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

**ಸಂನುಡಿ**

## ಸಮಾಜದ ಸೇವೆಯಲ್ಲಿ ಸಾಹಿತ್ಯದ ಪಾತ್ರ

ಸಾಹಿತ್ಯವು ಸಮಾಜದ ಆತ್ಮಸಾಕ್ಷಿಯಂತೆ ಕಾರ್ಯನಿರ್ವಹಿಸುತ್ತದೆ. ಅದು ಮಾನವನ ಒಳಗಿರುವ ಭಾವನೆ, ಚಿಂತನೆ, ನೋವು–ನಲಿವುಗಳನ್ನು ಶಬ್ದರೂಪದಲ್ಲಿ ವ್ಯಕ್ತಪಡಿಸಿ ಸಮಾಜದ ಮುಂದೆ ಇಡುತ್ತದೆ. ಕೇವಲ ಮನರಂಜನೆಗೆ ಮಾತ್ರವಲ್ಲದೆ, ಸಮಾಜವನ್ನು ಜಾಗೃತಗೊಳಿಸುವ, ಮಾರ್ಗದರ್ಶನ ಮಾಡುವ ಮಹತ್ವದ ಹೊಣೆಗಾರಿಕೆಯನ್ನು ಸಾಹಿತ್ಯ ಹೊತ್ತುಕೊಂಡಿದೆ.

ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಸಾಹಿತ್ಯದ ಪಾತ್ರ ಅಪಾರ. ಅನ್ಯಾಯ, ಶೋಷಣೆ, ಅಸಮಾನತೆ, ಭ್ರಷ್ಟಾಚಾರ ಮುಂತಾದ ಸಮಸ್ಯೆಗಳ ಬಗ್ಗೆ ಕವಿತೆ, ಕಥೆ, ನಾಟಕಗಳು ಪ್ರಶ್ನೆ ಎತ್ತುತ್ತವೆ. ಓದುಗನ ಮನಸ್ಸಿನಲ್ಲಿ ಚಿಂತನೆ ಹುಟ್ಟಿಸಿ, ಬದಲಾವಣೆಯ ಅಗತ್ಯತೆಯ ಅರಿವು ಮೂಡಿಸುತ್ತವೆ.

ಮೌಲ್ಯಬೋಧನೆ ಮತ್ತು ಮಾನವೀಯತೆ ಬೆಳೆಸುವಲ್ಲಿ ಸಾಹಿತ್ಯ ಪ್ರಮುಖ ಸಾಧನ. ಪ್ರೀತಿ, ಕರುಣೆ, ಸಹಾನುಭೂತಿ, ಸಹಬಾಳ್ವೆ ಮುಂತಾದ ಮೌಲ್ಯಗಳನ್ನು ಕಥಾನಕಗಳ ಮೂಲಕ ಸಹಜವಾಗಿ ಬಿಂಬಿಸುತ್ತವೆ. ಇದರಿಂದ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣವಾಗುತ್ತದೆ ಮತ್ತು ಸಮಾಜ ಸುಸ್ಥಿರವಾಗುತ್ತದೆ.

ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆ ಕೂಡ ಸಾಹಿತ್ಯದ ಮೂಲಕ ಸಾಧ್ಯ. ಜನಪದ ಸಾಹಿತ್ಯ, ಪುರಾಣಗಳು, ಐತಿಹಾಸಿಕ ಕೃತಿಗಳು ಸಮಾಜದ ಗುರುತನ್ನು ಉಳಿಸುವುದರ ಜೊತೆಗೆ ಮುಂದಿನ ಪೀಳಿಗೆಗೆ ಭಾಷೆ, ಸಂಸ್ಕೃತಿ, ಜೀವನಮೌಲ್ಯಗಳನ್ನು ಹಸ್ತಾಂತರಿಸುವ ಸೇತುವೆಯಾಗಿ ಪರಿಣಮಿಸುತ್ತವೆ.

ಸಾಮಾಜಿಕ ಪರಿವರ್ತನೆಗೆ ಪ್ರೇರಣೆ ನೀಡುವ ಶಕ್ತಿ ಸಾಹಿತ್ಯಕ್ಕಿದೆ. ಸ್ವಾತಂತ್ರ್ಯ ಹೋರಾಟದ ಸಾಹಿತ್ಯವಾಗಲಿ, ದಲಿತ–ಬಂಡಾಯ ಸಾಹಿತ್ಯವಾಗಲಿ – ಇವು ಸಮಾಜದ ಮೌನವನ್ನು ಮುರಿದು ಧ್ವನಿಯಿಲ್ಲದವರಿಗೆ ಧ್ವನಿಯಾಗಿವೆ.

ದಾಸರ ಪದಗಳು, ನೀತಿ ಕಥೆಗಳು, ಸುಬೋಧಗಳು, ವಿಡಂಬನೆಗಳು, ಆಯಾ ಕ್ಷೇತ್ರಗಳ ಆಗುಹೋಗುಗಳ ಮೇಲೆ ಗಮನ ಚೆಲ್ಲುವ ಪ್ರಸಂಗಗಳು, ವಿರಸನಗಳು ಇಂತಹ ಅನೇಕಾನೇಕ ಸಮಯೋಚಿತ ಬರಹಗಳು ಸಮಾಜದ ಕಣ್ಣನ್ನು ತೆರೆಸುತ್ತಲೇ ಇದ್ದು ಸಂಪೂರ್ಣವಾಗಿ ಅಲ್ಲದಿದ್ದರೂ ಸ್ವಲ್ಪಮಟ್ಟಿಗಾದರೂ ಉಪಯುಕ್ತವೆನಿಸಿವೆ. ಅದರಲ್ಲೂ ಮಾನಸಿಕ ತುಮುಲಗಳಲ್ಲಿ ಸಿಕ್ಕು ಪರಿತಪಿಸುತ್ತಿರುವವರ ನೆರವಿಗೆ ಸಹಾಯ ಹಸ್ತ ನೀಡಲು ಲೇಖನಗಳು ನಿಂತಿವೆ.

ಒಟ್ಟಿನಲ್ಲಿ, ಸಾಹಿತ್ಯವು ಸಮಾಜದ ಕನ್ನಡಿಯಷ್ಟೇ ಅಲ್ಲ, ಅದರ ದೀಪವೂ ಹೌದು. ಅದು ಸಮಾಜದ ದೋಷಗಳನ್ನು ತೋರಿಸಿ, ಉತ್ತಮ ಮಾರ್ಗಕ್ಕೆ ಒಯ್ಯುವ ಹೊಸ್ತಿಲಾಗಿದೆ. ಆದ್ದರಿಂದ ಸಮಾಜದ ಸೇವೆಯಲ್ಲಿ ಸಾಹಿತ್ಯದ ಪಾತ್ರ ಶಾಶ್ವತವೂ, ಅನಿವಾರ್ಯವೂ ಆಗಿದೆ. ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಸಮಾಜಮುಖಿ ಸಾಹಿತ್ಯ ಹೊಮ್ಮಲೆಂದು ಆಶಿಸೋಣ.

**ಡಾ. ಬೆಳವಾಡಿ. ಕೃ ಪ್ರಭಾಕರ್**
ಸಂಪಾದಕರು

## ದಿನಾಂಕ ೦೪/೦೧/೨೦೨೬ : ಬಿ.ಎಂ.ಶ್ರೀ. ಪ್ರತಿಷ್ಠಾನದ 'ಶ್ರೀ ಸಾಹಿತ್ಯ ಪ್ರಶಸ್ತಿ' ಪ್ರದಾನ ಸಮಾರಂಭ

**ಪ್ರಶಸ್ತಿ ಪುರಸ್ಕೃತರು** : ಹಿರಿಯ ವಿದ್ವಾಂಸರು ಮತ್ತು ನಾಟಕಕಾರರಾದ ಡಾ. ಕೆ. ಮರುಳಸಿದ್ದಪ್ಪ.

**ಪ್ರಶಸ್ತಿ ಪ್ರದಾನ** : ಬಂಡಾಯ ಸಾಹಿತಿಗಳು, ಚಲನಚಿತ್ರ ನಿರ್ದೇಶಕರಾದ ನಾಡೋಜ ಬರಗೂರು ರಾಮಚಂದ್ರಪ್ಪ.

**ಮುಖ್ಯ ಅತಿಥಿಗಳು** : ಬಿ.ಎಂ.ಶ್ರೀ. ಅವರ ಮೊಮ್ಮಕ್ಕಳಾದ ಶ್ರೀಮತಿ ಕಮಲಿನಿ ಬಾಲುರಾವ್ ಮತ್ತು ಖ್ಯಾತ ಕಥೆಗಾರ್ತಿ ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್.

**ಅಭಿನಂದನಾ ನುಡಿ** : ಡಾ. ಎಚ್. ದಂಡಪ್ಪ

**ಗೌರವ ಉಪಸ್ಥಿತಿ** : ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ.

**ಅಧ್ಯಕ್ಷತೆ** : ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ.

**೨೦೨೬ ಸಾಲಿನ 'ಶ್ರೀ ಸಾಹಿತ್ಯ ಪ್ರಶಸ್ತಿ' ಆಯ್ಕೆ ಸಮಿತಿ ಸದಸ್ಯರುಗಳು:** ಡಾ. ಚನ್ನಪ್ಪ ಕಟ್ಟಿ, ಡಾ. ಎಚ್.ದಂಡಪ್ಪ ಮತ್ತು ಡಾ. ಎಚ್.ಎನ್.ಮುರಳೀಧರ.

ವಿದುಷಿ ಸುಮಲತಾ ಮಂಜುನಾಥ ಹಾಡಿದ ಬಿ.ಎಂ.ಶ್ರೀ. ವಿರಚಿತ 'ಕರುಣಾಳು ಬಾ ಬೆಳಕೆ' ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ದತ್ತಿಯ ಹಿನ್ನೋಟವನ್ನು ತಿಳಿಸಿ, ವೇದಿಕೆಯ ಮೇಲಿದ್ದ ಗಣ್ಯರನ್ನು ಪರಿಚಯಿಸಿ, ಎಲ್ಲರಿಗೂ ಸ್ವಾಗತ ಕೋರಿದರು.

ಇದೇ ಸಂದರ್ಭದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಷಾಣ್ಮಾಸಿಕ ಪತ್ರಿಕೆಯಾದ 'ಕರ್ನಾಟಕ ಲೋಚನ'ವನ್ನು ಲೋಕಾರ್ಪಣೆ ಮಾಡಲಾಯಿತು. ಗೌರವ ಕೋಶಾಧಿಕಾರಿಗಳಾದ ಪ್ರೊ. ಚಂದ್ರಶೇಖರ



ನಾದೂರು ಇದರ ಸಂಪಾದಕರು.

**'ಚಾರಿತ್ರಿಕ ತಿರುವನ್ನು ನೀಡಿದ ಕೆ.ಎಂ.ಎಸ್. ಮೇಷ್ಟ್ರು'**

ನಾಡೋಜ ಬರಗೂರು ರಾಮಚಂದ್ರಪ್ಪನವರು ಮಾತನಾಡುತ್ತಾ, "ಇವತ್ತಿನ ಕಾರ್ಯಕ್ರಮದ ವಿಶೇಷ ಎಂದರೆ, ನಾನು ವಿದ್ಯಾರ್ಥಿಯಾಗಿದ್ದಾಗ ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್ ಅವರು ಬರೆದ ಕೇವಲ ಕಥೆ ಕಾದಂಬರಿಗಳನ್ನು ಓದುತ್ತಿದ್ದ ನನಗೆ, ಅನೇಕಾನೇಕ ವರ್ಷಗಳ ನಂತರ, ಇವರೇ ಆ ರಾಜಲಕ್ಷ್ಮಿ ಎಂದು ಪ್ರತ್ಯಕ್ಷವಾಗಿ ನೋಡುವ ಸೌಭಾಗ್ಯ ದೊರೆತದ್ದು. ಇಂದು ಡಾ. ಮರುಳಸಿದ್ದಪ್ಪನವರಿಗೆ ಪ್ರಶಸ್ತಿ ಪ್ರದಾನ ಮಾಡುವುದು ಎಷ್ಟು ಸಂತೋಷದ ವಿಷಯವೋ, ಅಷ್ಟೇ ಸಂಕೋಚದ ವಿಷಯ. ಒಬ್ಬ ವಿದ್ಯಾರ್ಥಿ ತನ್ನ ಗುರುಗಳಿಗೆ ಪ್ರಶಸ್ತಿ ಪ್ರದಾನ ಮಾಡುವುದು ಮುಜುಗರದ ಕೆಲಸ. ಪ್ರಶಸ್ತಿ ಪುರಸ್ಕೃತರನ್ನು ಎಲ್ಲರೂ ಕೆ.ಎಂ.ಎಸ್. ಎಂದು ಕರೆಯುವುದೇ ವಾಡಿಕೆ. ಶ್ರೀಯುತರು ಕನ್ನಡ ನಾಟಕಗಳ ವಿಮರ್ಶೆಯನ್ನು ಕೈಗೆತ್ತಿಕೊಂಡಾಗ, ಅದು ಸಂಕ್ರಮಣದ ಕಾಲ. ಅಷ್ಟೇ ಅಲ್ಲ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಜಾಗೃತಿ ಮೂಡಿಸುವ ಕಾಲ. ಅಂತಹ ಕ್ಲಿಷ್ಟ ಕಾಲದಲ್ಲಿ ಕೆ.ಎಂ.ಎಸ್. ಮಾಡಿದ ನಾಟಕಗಳ ವಿಮರ್ಶೆಗಳು ಒಂದು ಚಾರಿತ್ರಿಕ ತಿರುವನ್ನು ಪಡೆದು, ಗುರುತಿಸಲ್ಪಟ್ಟವು.

ಕನ್ನಡ ರಂಗಭೂಮಿಯ ವಿಮರ್ಶಾ ಬರವಣಿಗೆಗಳಲ್ಲಿ ಹಳೆಯ ಜಾಡುಗಳು ಪ್ರಚಲಿತವಿದ್ದರೂ, ಅದನ್ನು ಬದಿಗೊತ್ತಿ ಹೊಸ ಆಯಾಮವನ್ನು ಹುಟ್ಟುಹಾಕಿದ ಮಹಾನುಭಾವರು ನಮ್ಮ ಕೆ.ಎಂ.ಎಸ್. ಅವರು. ಅಂದು ಹೆಸರು ಮಾಡಿದ್ದ ಅನೇಕ ದಿಗ್ಗಜರ ಕೃತಿಗಳ ಬಗೆಗೆ ಇವರು ಮಾಡುತ್ತಿದ್ದ ವಿಮರ್ಶೆ ಸೃಜನಶೀಲವಾದದ್ದು. ನಿವೃತ್ತಿ ನಂತರವೂ ಕ್ರಿಯಾಶೀಲರಾದವರು ಕೆ.ಎಂ.ಎಸ್.

ಅವರು ಸತ್ಯಹರಿಶ್ಚಂದ್ರನ ಕಾವ್ಯವನ್ನು ಕಲಿಸುವಾಗ ಪ್ರಮುಖವಾಗಿ ಹೇಳಿದ್ದು, ಹರಿಶ್ಚಂದ್ರ ನಮ್ಮ ನಿಮ್ಮ ಹಾಗೇ ಒಬ್ಬ. ಆದರೆ ಅವನು ಸತ್ಯವನ್ನೇ ಜೀವನವಾಗಿಸಿಕೊಂಡ ಪ್ರಕ್ರಿಯೆಯನ್ನು ನಾವು ಗಮನಿಸಬೇಕು ಎಂಬ ಅಂಶವನ್ನು ಎತ್ತಿ ತೋರಿಸಿದ್ದು. ಹಳೆಯ ಕಾವ್ಯಗಳನ್ನು ಆಧುನಿಕ ರೀತಿಯಲ್ಲಿ ನೋಡಲು ಸಾಧ್ಯ ಎಂಬ ಮಾತನ್ನು ಸಾಬೀತು ಮಾಡಿದವರು ಈ ಮೇಷ್ಟ್ರು. ಕೆ.ಎಂ.ಎಸ್. ಅವರು ಬಿತ್ತಿದ ಬೀಜ, ಹಳಗನ್ನಡ ಸಾಹಿತ್ಯವನ್ನು ಸಮಕಾಲೀನ ದೃಷ್ಟಿಕೋನದಿಂದ ಹೇಗೆ ನೋಡಬೇಕು ಎಂಬ ಅಂಶ ನನ್ನ ಬರವಣಿಗೆಗಳಿಗೆ ಪ್ರೇರಣೆಯಾಗಿ ಚಿಗುರಿತು ಎಂದರು. ಕನ್ನಡದ ಸಮಕಾಲೀನ ಪ್ರಜ್ಞೆಯ ಸಂಕೇತವಾದ ಮರುಳಸಿದ್ದಪ್ಪ ಅವರನ್ನು ಬಿ.ಎಂ.ಶ್ರೀ.ಯವರ ಚಿಂತನೆಗಳೊಂದಿಗೆ ಹೋಲಿಸಬಹುದು. ಬಿ.ಎಂ.ಶ್ರೀ. ನವೋದಯ ಸಾಹಿತ್ಯ ಪರಂಪರೆಯ ಪ್ರಜ್ಞೆಯ ಪ್ರತೀಕ. ಆದ್ದರಿಂದ ಅವರಿಗೆ 'ಶ್ರೀ ಸಾಹಿತ್ಯ ಪ್ರಶಸ್ತಿ' ನೀಡುತ್ತಿರುವುದು ಒಂದು ವಿಶೇಷ ಅನುಬಂಧ ಮತ್ತು ಸಮಯೋಚಿತ ಸಂಗತಿ. ಇದು ಉತ್ತಮ ಬೆಳವಣಿಗೆ. ಸಾಹಿತ್ಯ ಮತ್ತು ಸಾಂಸ್ಕೃತಿಕ ನೋಟಗಳ ಮಿಲನ" ಎಂದರು.

**'ಬಿ.ಎಂ.ಶ್ರೀ.ಯವರೂ ಮತ್ತು ಮೇಷ್ಟ್ರು ಕೆ.ಎಂ.ಎಸ್. ಅವರೂ'**

ಶ್ರೀ ಸಾಹಿತ್ಯ ಪ್ರಶಸ್ತಿಯ ಆಯ್ಕೆ ಸಮಿತಿಯಲ್ಲಿದ್ದ ಡಾ. ಎಚ್. ದಂಡಪ್ಪನವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. 'ಬಿ.ಎಂ.ಶ್ರೀ. ಯವರೂ ಮತ್ತು ಮೇಷ್ಟ್ರು ಕೆ.ಎಂ.ಎಸ್. ಅವರೂ ನಾಟಕಗಳ ಕಡೆ ಒಲವು ತೋರಿದವರು. ಒಬ್ಬರು ನಾಟಕಗಳ ಸೃಷ್ಟಿಕರ್ತರಾದರೆ, ಮತ್ತೊಬ್ಬರು ನಾಟಕಗಳ ಆಳದಲ್ಲಿ ಹೊಕ್ಕು ವಿಮರ್ಶೆಗಳನ್ನು ಬರೆದವರು. ಮೇಷ್ಟ್ರು ವೈಚಾರಿಕ ಮನೋಭಾವವನ್ನು ಬೆಳೆಸಿಕೊಂಡವರು. ಸಮಾಜದ ಕಟ್ಟಕಡೆಯ ಮನುಷ್ಯನಲ್ಲಿ ತಿಳುವಳಿಕೆ ಮೂಡಿಸುವುದೇ ನಾಟಕಗಳ



ಉದ್ದೇಶ. ಮರುಳಸಿದ್ದಪ್ಪನವರು ಕೇವಲ ನಾಟಕಗಳ ವಿಮರ್ಶೆ ಮಾಡಲಿಲ್ಲ. ಸಾಹಿತ್ಯ ವಿಮರ್ಶೆಯನ್ನೂ ಮಾಡಿದ್ದಾರೆ. ವಿಮರ್ಶೆಯನ್ನು ಮಾಡುವಾಗ, ಸಾಹಿತ್ಯ ಯಾವಾಗಲೂ ಜ್ಞಾನವನ್ನು ಉತ್ಪತ್ತಿ ಮಾಡುವ ಕಾರ್ಯವಾಗಬೇಕು. ಈ ಕೃತಿಗಳು ಕೇವಲ ರಸವನ್ನು ಸ್ವಾದಿಸುವ ವಸ್ತುಗಳು ಆಗಬಾರದು ಅನ್ನುವುದನ್ನು ಕೆ.ಎಂ.ಎಸ್. ತಮ್ಮ ವಿಮರ್ಶೆಗಳಲ್ಲಿ ಪ್ರತಿಪಾದಿಸಿದ್ದಾರೆ. ಅವರು ಕೇವಲ ಸಾಹಿತ್ಯ ಮತ್ತು ವಿಮರ್ಶಾ ಬರವಣಿಗೆಗಳಿಗೆ ಸೀಮಿತವಾಗಿರಲಿಲ್ಲ. ನಾಟಕಗಳು ಸಮಾಜದ ಉದ್ಧಾರಕ್ಕೆ ಬಳಕೆಯಾಗಬೇಕು ಎನ್ನುವ ನಿಟ್ಟಿನಲ್ಲಿ, ಕನ್ನಡ ನಾಟಕಗಳ ಸಂಘವನ್ನು ಪ್ರಾರಂಭಿಸಿ, ಸಮಾಜದ ಪರಿವರ್ತನೆಯ ಕಾರ್ಯದಲ್ಲಿ ತೊಡಗಿಸಿಕೊಂಡ ಧೀಮಂತ ವ್ಯಕ್ತಿ ಇಂದಿನ 'ಶ್ರೀ ಸಾಹಿತ್ಯ ಪ್ರಶಸ್ತಿ' ಪುರಸ್ಕೃತರಾದ ಡಾ. ಮರುಳಸಿದ್ದಪ್ಪನವರು" ಎಂದರು.

**'ವಿಮರ್ಶೆಯಲ್ಲಿ ಸಮತೋಲನವಿರಲಿ'**

ಬಿ.ಎಂ.ಶ್ರೀ.ಯವರ ಮೊಮ್ಮಗಳಾದ ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್ ಅವರು ಮಾತನಾಡುತ್ತಾ, "ಬಿ.ಎಂ.ಶ್ರೀ.ಯವರೇ ಆಗಲಿ ಅಥವಾ ಯಾರೇ ಬರಹಗಾರರಾಗಲಿ, ಅವರ ಬಗೆಗೆ ಮಾತನಾಡುವಾಗ ಅಥವಾ ಅವರ ಕೃತಿಗಳ ಬಗೆಗೆ ಬರೆಯುವಾಗ, ಆ ಬರಹಗಾರನಿಗೆ ಇದ್ದ ಅನುಕೂಲತೆಗಳು ಯಾವುವು, ಯಾವ ಸಂದರ್ಭಗಳಲ್ಲಿ ಬರೆದರು, ಆಗಿನ ಆಡಳಿತ ಮತ್ತು ಸಾಮಾಜಿಕ ಸನ್ನಿವೇಶಗಳು ಹೇಗಿದ್ದವು ಅನ್ನುವುದನ್ನು ಗಮನಿಸಬೇಕು. ಬಿ.ಎಂ.ಶ್ರೀ.ಯವರು ಯುಗಪ್ರವರ್ತಕ ಆಗಲು ಅಂದಿನ ಸನ್ನಿವೇಶಗಳೇ ಕಾರಣ. ಅಲ್ಲದೇ ಆಗ ರಾಜರುಗಳ ಆಳ್ವಿಕೆಯಿತ್ತು. 'ರಾಜಸೇವಾಸಕ್ತ' ಅತ್ಯುನ್ನತ ಬಿರುದನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಪಡೆಯುವಾಗ ಅವರು ಎಷ್ಟು ಸಮತೋಲನವನ್ನು ಕಾಪಾಡಿಕೊಂಡು ತಮ್ಮ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು. ವಿಮರ್ಶೆಗಾಗಿ ವಿಮರ್ಶೆಯಲ್ಲ. ವಿಮರ್ಶಕರು ಈ ಅಂಶವನ್ನು ಗಮನಿಸಬೇಕು" ಎಂಬ ಕಿವಿಮಾತನ್ನು ಹೇಳಿದರು.

**'ಬಿ.ಎಂ.ಶ್ರೀ. ಕನ್ನಡ ಸಾಹಿತ್ಯ ಲೋಕಕ್ಕೆ ಕೈಮರ'**

ಪ್ರಶಸ್ತಿ ಪುರಸ್ಕೃತರಾದ ಡಾ.ಮರುಳಸಿದ್ದಪ್ಪನವರು ಮಾತನಾಡುತ್ತಾ, "ಈ ಪ್ರಶಸ್ತಿ ಸ್ವೀಕರಿಸಬೇಕೋ ಬೇಡವೋ ಎಂಬ ಅನುಮಾನ ನನಗೆ ಕಾಡುತ್ತಿತ್ತು. ಏಕೆಂದರೆ, ಇದನ್ನು ನೀಡುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡವರೆಲ್ಲಾ ನನ್ನ ಶಿಷ್ಯರು ಎಂದು ಹೇಳಿದರೂ, ಇದು ಬಿ.ಎಂ.ಶ್ರೀ.ಯಂತಹ ಕನ್ನಡದ ಮಹಾನ್ ಯುಗಪ್ರವರ್ತಕನ ಹೆಸರಿನಲ್ಲಿ ಮತ್ತು ಅವರ ಹೆಸರಿನ ಸಂಸ್ಥೆ ಕೊಡಮಾಡುತ್ತಿರುವುದರಿಂದ ಇದನ್ನು ಸ್ವೀಕರಿಸಬೇಕು ಎಂದು ನಿರ್ಧರಿಸಿದೆ. ಬಿ.ಎಂ.ಶ್ರೀ.ಯವರು ಅಂದಿನ ಶತಮಾನದಲ್ಲಿ ಕನ್ನಡ ಸಾಹಿತ್ಯಕ್ಕೆ 'ಕೈಮರ'ವಾಗಿ ದಾರಿ ತೋರಿಸಿದವರು ಎಂದು ಹೇಳಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಮಾತನಾಡಿ, ಡಾ. ಮರುಳಸಿದ್ದಪ್ಪನವರ ಸಾಹಿತ್ಯ ಕೃಷಿಯ, ವಿಮರ್ಶೆಗಳ ಗತ್ತು ಮತ್ತು ನಾಟಕ ಸಾಹಿತ್ಯಕ್ಕೆ ಅವರಿತ್ತ ಅಪೂರ್ವ ಸೇವೆಯನ್ನು ಅವರ ಕೆಲವು ಪ್ರಕಟಣೆಗಳನ್ನು ಉದಾಹರಿಸಿ, 'ಶ್ರೀ ಸಾಹಿತ್ಯ ಪ್ರಶಸ್ತಿ'ಗೆ ಅತ್ಯಂತ ಅರ್ಹರಾದ ವ್ಯಕ್ತಿ ಇವರು ಎಂದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಅಧ್ಯಕ್ಷ ನುಡಿಗಳನ್ನು ಆಡುತ್ತಾ, ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಯಾವುದೇ ಪ್ರಶಸ್ತಿಗಳಿರಲಿ, ಅದರ ಪಾರದರ್ಶಕ ಆಯ್ಕೆಯ ಪ್ರಕ್ರಿಯೆ ಹೇಗೆ ಆಗುತ್ತದೆಂದು ಸಭೆಯ ಗಮನಕ್ಕೆ ತಂದರು.

ಶ್ರೀಮತಿ ಕಮಲಿನಿ ಬಾಲುರಾವ್ ಅವರ ಉಪಸ್ಥಿತಿ ಕಾರ್ಯಕ್ರಮಕ್ಕೆ ಶೋಭೆಯನ್ನು ತಂದಿತ್ತು.

ಪ್ರೊ. ಚಂದ್ರಶೇಖರ ನಾದೂರು ಅವರು ನಿರೂಪಣೆ ಕಾರ್ಯದ ಜೊತೆಗೆ, ವಂದನಾರ್ಪಣೆಯನ್ನೂ ಮಾಡಿದರು.

## ದಿನಾಂಕ ೦೨/೦೧/೨೦೨೬ : ಹಾಸ್ಯಬ್ರಹ್ಮ ಟ್ರಸ್ಟ್ ದತ್ತಿ

ಡಾ. ಬೈರಮಂಗಲ ರಾಮೇಗೌಡ ಇವರ ಅಧ್ಯಕ್ಷತೆಯಲ್ಲಿ, ಜಾನಪದ ವಿದ್ವಾಂಸರಾದ ಡಾ. ರವಿ ಯು. ಎಂ. ಅವರಿಂದ 'ಜಾನಪದದಲ್ಲಿ ಹಾಸ್ಯ' ವಿಷಯಕುರಿತು ವಿಚಾರ ಮಂಡನೆ.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ದತ್ತಿಯ ಸ್ವರೂಪದ ಬಗೆಗೆ ಬೆಳಕು ಚೆಲ್ಲಿ, ಅಂದಿನ ಉಪನ್ಯಾಸಕರಾದ ರವಿ ಯು.ಎಂ., ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ, ಉಪಸ್ಥಿತರಿದ್ದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು, ಬುಕ್ ಬ್ರಹ್ಮ ಸಿಬ್ಬಂದಿ ವರ್ಗದವರನ್ನು ಮತ್ತು ಪ್ರತ್ಯಕ್ಷ ಹಾಗೂ ಅಂತರ್ಜಾಲದ ಪ್ರೇಕ್ಷಕರನ್ನೂ ಕಾರ್ಯಕ್ರಮಕ್ಕೆ ಸ್ವಾಗತಿಸಿದರು.



ನಂತರ 'ಜಾನಪದದಲ್ಲಿ ಹಾಸ್ಯ' ಎಂಬ ವಿಷಯದ ಮೇಲೆ ಮಾತನಾಡಲು ಆಗಮಿಸಿರುವ ಡಾ. ರವಿ ಯು.ಎಂ. ಅವರ ಕಿರುಪರಿಚಯ ಮಾಡಿದರು.

**ನಾನು ನಗಬೇಕೇ, ಇಲ್ಲ ನಿನಗೆ 'ನಗ' ಬೇಕೇ?**

ಡಾ. ರವಿ ಅವರು ಉಪನ್ಯಾಸದ ಆರಂಭದಲ್ಲೇ, ತಾವು ಜನಪದ ಸಾಹಿತ್ಯದ ಮೇಲೆ ಅನೇಕ ಉಪನ್ಯಾಸಗಳನ್ನು ನೀಡಿದ್ದರೂ, ಭಾಷಣಗಳನ್ನು ಮಾಡಿದ್ದರೂ, 'ಜನಪದ ಸಾಹಿತ್ಯದಲ್ಲಿ' ಹಾಸ್ಯ ಎಂಬ ವಿಷಯವನ್ನು ಬಳಸಿಕೊಂಡು ನಿಮ್ಮನ್ನೆಲ್ಲಾ ಹಾಸ್ಯದ ಮೂಲಕ ನಗಿಸುವ ಪ್ರಥಮ ಪ್ರಯೋಗ ಇದು. ನಿಮ್ಮನ್ನೆಲ್ಲಾ ಹಾಸ್ಯಲೋಕಕ್ಕೆ ಕರೆದೊಯ್ಯುತ್ತೇನೊ ಅಥವಾ ಹಾಸ್ಯಕ್ಕೆ ಈಡಾಗುತ್ತೇನೋ ನೋಡಬೇಕಾಗಿದೆ ಎಂದು ಪ್ರಾರಂಭಿಸಿದರು. ಜನಪದಕ್ಕೆ ಸ್ಥಳದ, ಸಮಯದ ಗೋಜಿಲ್ಲ. ನಿಂತಲ್ಲೆ ಸ್ವಾಭಾವಿಕವಾಗಿ ಮಾತನಾಡಿದ ಪದಗಳೇ ಜನಪದ. ಹೀಗೆ ಹೇಳುತ್ತಾ ಒಂದು ಗ್ರಾಮದ ಅಜ್ಜಿಯ ಕಥೆಯನ್ನು ಉಲ್ಲೇಖಿಸಿ ಅದರಲ್ಲಿ ಅಡಕವಾಗಿರುವ ಹಾಸ್ಯವನ್ನು ಗಾದೆಯ ಮೂಲಕ ಚಿಮ್ಮಿಸಿದರು. ನಗುವನ್ನೇ ವಸ್ತು ಮಾಡಿಕೊಳ್ಳಬಹುದು, ಇಲ್ಲ ವಸ್ತುವನ್ನೇ ನಗುವಾಗಿಸಬಹುದು. ಒಮ್ಮೊಮ್ಮೆ, ಇದು ಕೆಲವರಿಗೆ ಸಂತೋಷ ಉಂಟು ಮಾಡಿದರೆ, ಕೆಲವರಿಗೆ ಇರುಸು ಮುರುಸು ಆಗುವ ಸನ್ನಿವೇಶವೂ ಉಂಟು. ಒಮ್ಮೆ ಪತಿ ವ್ಯಾಪಾರಕ್ಕೆಂದು ಹೋದವನು ಬೇಗನೆ ಮನೆಗೆ ಬಂದಿರಲಿಲ್ಲ. ಅವನಿಗಾಗಿ ರುಚಿಕರ ಅಡಿಗೆ ಮಾಡಿಟ್ಟುಕೊಂಡು ಆಲಂಕಾರಿಕ ಒಡವೆಗಳನ್ನು ಧರಿಸಿ ಮಡದಿ ಕಾಯುತ್ತಾ ಕುಳಿತಿರುತ್ತಾಳೆ. ಅದನ್ನು ಕಂಡು ಪಕ್ಕದ ಮನೆಯಾಕೆ ಬಂದು ಹೀಯಾಳಿಸುವ ಮಾತುಗಳನ್ನು ಲಾವಣಿಯ ರೂಪದಲ್ಲಿ ಹಾಡುತ್ತಾಳೆ. ಈ ಲಾವಣಿಯೆ ಜನಪದವಾಗುತ್ತದೆ. ಇದರಲ್ಲಿ ಬಳಸುವ ಪದಗಳು ಒಂದೊಂದೂ ನಗಿಸುವ ಜೊತೆಗೆ, ಕಾಯುತ್ತಾ ಕುಳಿತಿರುವ ಮಡದಿಗೆ ಚುಚ್ಚುವ ರೀತಿಯಲ್ಲಿ ಇರುತ್ತದೆ ಎಂಬ ಅಂಶವನ್ನು ಬಹಳ ಸ್ವಾರಸ್ಯಕರವಾಗಿ ರವಿಯವರು ಬಿಂಬಿಸಿದರು. ಮತ್ತೊಂದು ಸನ್ನಿವೇಶದಲ್ಲಿ ಗಂಡ ಹೊರಗೆ ಹೋದಾಗ "ಇಟ್ಟುಕೊಂಡರೆ, ಕಟ್ಟಿಕೊಂಡರೆ' 'ನೀ ಮುಡಿವ ಮಲ್ಲಿಗೆ, ಅವಳೊಮ್ಮೆ ಮುಡಿದಾಳು'ಎಂಬ ಹಾಡನ್ನು ಕಟ್ಟಿ ವ್ಯಂಗ್ಯ ತರಿಸಿದ್ದನ್ನು ಹೇಳುತ್ತಾ, ಅನೇಕ ಪ್ರಸಂಗಗಳಲ್ಲಿ ಈ ಜನಪದ ಸನ್ನಿವೇಶಕ್ಕೆ ತಕ್ಕಂತೆ ತತ್ಕ್ಷಣ ಉತ್ಪತ್ತಿ ಆಗುವುದನ್ನು ತಿಳಿಸಿದರು. ಹೀಗೆ ಜನಪದ ಸಾಹಿತ್ಯದಿಂದ ಅನೇಕ ಸನ್ನಿವೇಶಗಳನ್ನು ಎತ್ತಿಕೊಂಡು 'ಜಾನಪದ'ದಲ್ಲಿ ಅಡಗಿರುವ ಹಾಸ್ಯ ಪ್ರಸಂಗಗಳನ್ನು 'ಜಾಣತನ'ದಿಂದ ಹೆಕ್ಕಿ, ಡಾ. ರವಿ ಅವರು ಆಗತಾನೇ ಕಿತ್ತು ತಂದ ಅವರೇಕಾಯಿಯ ಸೊಗಡಿನಂತೆ ಮಂಡಿಸಿದರು. "ಇಬ್ಬರು ಹೆಂಡಿರ ಕಾಟ, ಎರಡು ತಿಗಣೆಗಳ ಕಾಟ" ನುಡಿಯಂತೂ ನಗೆಬುಗ್ಗೆಯನ್ನೇ ಚಿಮ್ಮಿಸಿತು. ವಿಶೇಷವಾಗಿ ಅಕ್ಕಪಕ್ಕದ ಹೆಂಗಸರು ಒಟ್ಟಿಗೆ ಸೇರಿದಾಗ, ಅಥವಾ ಸಾಮೂಹಿಕ ಕೆಲಸಗಳಲ್ಲಿ ತೊಡಗಿಸಿಕೊಂಡಾಗ ಕಟ್ಟುತ್ತಿದ್ದ ಪದಗಳು ಒಂದು ರೀತಿಯಲ್ಲಿ ಒಬ್ಬರನ್ನೊಬ್ಬರು ಗೇಲಿ ಮಾಡುತ್ತಾ ಹಾಡುತ್ತಾ ಮಾಡುತ್ತಿದ್ದ ಕೆಲಸದ ಶ್ರಮವನ್ನು ಮರೆಸುತ್ತಿದ್ದವು. ಇನ್ನು ಕೆಲವು ಪ್ರಸಂಗಗಳಲ್ಲಿ ಒಗಟುಗಳನ್ನು ನಿರ್ಮಿಸಿ ಹೋಲಿಸುತ್ತಿದ್ದ ವಿಷಯಗಳನ್ನು ವಿನಿಮಯ ಮಾಡಿದರು. ಒಂದು ಸನ್ನಿವೇಶದಲ್ಲಿ ಜಗಳವಾಗಿ, ವಿಕೋಪಕ್ಕೆ ಹೋಗಿ, ರಕ್ತ ಚಿಮ್ಮುವ ರೀತಿಯನ್ನು, ಹಸಿರು ಎಲೆ, ಕಪ್ಪು ಅಡಿಕೆ, ಬಿಳಿಯ ಸುಣ್ಣವನ್ನು ಬಾಯಿಗೆ ಹಾಕಿಕೊಂಡು ಅಗಿದಾಗ ಮೂಡುವ ಕೆಂಪು ಬಣ್ಣಕ್ಕೆ ಹೊಂದಿಸುವ ಪದಗಳನ್ನುಳ್ಳ ಒಗಟಿಗೆ ಕಾರಣವಾಗಿದ್ದನ್ನು ಸಮಂಜಸವಾಗಿ ಬಣ್ಣಿಸಿದರು. ಒಟ್ಟಾರೆ, ಇವತ್ತಿನ "ಜಾನಪದದಲ್ಲಿ ಹಾಸ್ಯ' ಜನಪದದ ಅದ್ಭುತ ಭಂಡಾರವನ್ನು ನೆರೆದ ಎಲ್ಲರಿಗೂ ಹಂಚಿದಂತೆ ಆಗಿತ್ತು. ಕೊನೆಯಲ್ಲಿ ಹೇಳಿದ ಪ್ರಸಂಗ, ಹೆಂಡತಿ ಗಂಡನಿಗೆ, "ನೀವು ಯಾವಾಗಲೂ ನಗಬೇಕು" ಅನ್ನುತ್ತಾಳೆ. ಆಗ ಗಂಡ, "ಪ್ರಿಯೆ ನಿಜ ಹೇಳು. ನಾನು ನಗಬೇಕೇ, ಇಲ್ಲ ನಿನಗೆ 'ನಗ' ಬೇಕೇ?" ಎಂಬ ಹಾಸ್ಯ ನುಡಿ ಇಂದಿನ ಕಾರ್ಯಕ್ರಮಕ್ಕೆ ಕಲಶಪ್ರಾಯ ಆಗಿತ್ತು.

ನಂತರ ಡಾ. ಶಾಂತರಾಜು ಹಳ್ಳಿಯಲ್ಲಿ ನಡೆದಾಡುವಾಗಲೂ ಸಂತೋಷದ ಅಥವಾ ದುಃಖದ ಸನ್ನಿವೇಶಗಳಲ್ಲಿ ಹೊಮ್ಮುವ ಜನಪದವನ್ನು ತಮ್ಮ ಸ್ವಾನುಭವದ ಆಧಾರದ ಮೇಲೆ ಅರುಹಿದರು.

ಡಾ. ಬೈರಮಂಗಲ ರಾಮೇಗೌಡ ಅವರು ಅಧ್ಯಕ್ಷೀಯ ಮಾತುಗಳನ್ನಾಡುತ್ತಾ, ಡಾ. ರವಿಯವರು ಇಂದಿನ ವಿಷಯ "ಜಾನಪದದಲ್ಲಿ ಹಾಸ್ಯ" ಇದಕ್ಕೆ ಬೇಕಾದ ಪರಿಕರಗಳನ್ನು, ವಿಷಯ ಸಲಕರಣೆಗಳನ್ನು ಜನಪದ ಸಾಹಿತ್ಯದಲ್ಲಿ ಅಡಗಿರುವ ಕಥೆ, ವಿಡಂಬನೆ, ಒಗಟು, ಗಾದೆ ಇತ್ಯಾದಿಗಳಿಂದ ಆರಿಸಿ ತಂದು ನಮಗೆಲ್ಲಾ ಉಣಬಡಿಸಿದ್ದಾರೆ. ಅದರಲ್ಲೂ ಅನಕ್ಷರಸ್ತರ ಬಾಯಿಂದ ಸ್ವಾಭಾವಿಕವಾಗಿ ಅನುಭವದ ಆಧಾರದ ಮೇಲೆ ಸಾವಿರಾರು ವರ್ಷಗಳಿಂದ ಉತ್ಪತ್ತಿಯಾದ ಜನಪದಗಳು ಎಷ್ಟು ಉತ್ಕೃಷ್ಟವಾದದ್ದು ಎಂಬುದನ್ನು ಹಾಸ್ಯ ಪ್ರಸಂಗಗಳನ್ನು ಉದಾಹರಿಸಿ ಡಾ. ರವಿ ಹೇಳುತ್ತಿದ್ದಾಗ, ನಮಗೆ ಜನಪದ ಸಾಹಿತ್ಯದ ಬೆರಗು ಎದ್ದು ಕಾಣುತ್ತಿತ್ತು ಎಂದರು. ಇದಕ್ಕಾಗಿ ಡಾ. ರವಿಯವರನ್ನು ಶ್ಲಾಘಿಸಿದರು.

ವಂದನಾರ್ಪಣೆಯೊಂದಿಗೆ ಡಾ. ರವಿಯವರಿಗೆ ನೆನಪಿನ ಕಾಣಿಕೆ ಸಲ್ಲಿಸುವುದರ ಮೂಲಕ ಇಂದಿನ ಹಾಸ್ಯಭರಿತ ಅಂಕಣಕ್ಕೆ ಪರದೆಯನ್ನು ಎಳೆಯಲಾಯಿತು.

## ದಿನಾಂಕ ೦೭/೦೧/೨೦೨೬ : ಶ್ರೀ ಬಿ.ಎಸ್. ಗೋಪಾಲರಾವ್ ಮತ್ತು ಶ್ರೀಮತಿ ವೇದವತಿಬಾಯಿ ದತ್ತಿ

**'ಹರಿಶ್ಚಂದ್ರ ಕಾವ್ಯದ ಮೃಗಯಾ ಪ್ರಸಂಗ' : ಗಮಕ ವಾಚನ ಮತ್ತು ವ್ಯಾಖ್ಯಾನ:**

**ವಾಚನ :** ಪ್ರಸಿದ್ಧ ಗಮಕಿಗಳು, ಮಾಜಿ ಅಧ್ಯಕ್ಷರು, ಗಮಕ ಕಲಾ ಪರಿಷತ್ತು, ಶ್ರೀಮತಿ ಗಂಗಮ್ಮ ಕೇಶವಮೂರ್ತಿ.

**ವ್ಯಾಖ್ಯಾನ :** ಗಮಕ ವ್ಯಾಖ್ಯಾನಕಾರರಾದ ಶ್ರೀಮತಿ ಛಾಯಾ ಗುರುಮೂರ್ತಿ.

**ಉಪಸ್ಥಿತಿ:** ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ದತ್ತಿಯ ಹಿನ್ನೋಟವನ್ನು ಪರಿಚಯಿಸಿ, ಹಾಗೇ, ಇಂದು ಗಮಕ ವಾಚನ ಮಾಡುವ ಶ್ರೀಮತಿ ಗಂಗಮ್ಮ ಕೇಶವಮೂರ್ತಿ, ವ್ಯಾಖ್ಯಾನ ಮಾಡುವ ಶ್ರೀಮತಿ ಛಾಯಾ ಗುರುಮೂರ್ತಿ, ಸಭೆಯ ಅಧ್ಯಕ್ಷರಾದ ಡಾ.

ಬೈರಮಂಗಲ ರಾಮೇಗೌಡ, ಅವರ ಕಿರು ಪರಿಚಯ ಮಾಡಿ, ಇವರೆಲ್ಲರನ್ನೂ,ಆಹ್ವಾನಿತರನ್ನು ಸ್ವಾಗತಿಸಿದರು.

ಶ್ರೀಮತಿ ಗಂಗಮ್ಮ ಕೇಶವಮೂರ್ತಿಯವರ "ಶ್ರೀಪತಿಗೆ ಸೊಬಗನು ಉಡುಪತಿಗೆ ಶಾಂತಿಯನು ..ಪಂಪಾಪತಿ ವಿರೂಪಾಕ್ಷನು" ನುಡಿಯೊಂದಿಗೆ ಗಮಕ ವಾಚನ ಪ್ರಾರಂಭವಾಯಿತು. "ರಾಘವಾಂಕನ ಹರಿಶ್ಚಂದ್ರ ಕಾವ್ಯ"ದ ಬಗೆಗೆ ಕೆಲವು ಮಾತುಗಳನ್ನು ಆಡಿ ಶ್ರೀಮತಿ ಛಾಯಾ ಗುರುಮೂರ್ತಿ ಅವರು ವ್ಯಾಖ್ಯಾನವನ್ನು ನಡೆಸಿಕೊಟ್ಟರು.

ಶ್ರೀಮತಿ ಗಂಗಮ್ಮ ಕೇಶವಮೂರ್ತಿಯವರು ಕಾರ್ಯಕ್ರಮದ ಕೊನೆಯಲ್ಲಿ ಕೆಲವು ಮಾತುಗಳನ್ನು ಪ್ರಸ್ತಾಪಿಸಿದರು. ನನಗೆ ಈ "ರಾಘವಾಂಕನ ಹರಿಶ್ಚಂದ್ರ ಕಾವ್ಯ" ಅಚ್ಚುಮೆಚ್ಚಿನ ಕಾವ್ಯ. ಇದರಲ್ಲಿ ಕವಿಯು ಬಹಳ ಸಂಕ್ಷಿಪ್ತವಾಗಿ ಕೆಲವೇ ಸಾಲುಗಳಲ್ಲಿ ಬಹಳಷ್ಟು ಅರ್ಥಗಳು ಬರುವಂತೆ ಬರೆಯಬಲ್ಲ ಧೀಮಂತ. ಇದು ಅವನ ವಿಶೇಷತೆ. ಹೀಗಾಗಿ ನನಗೆ ಈ ಕಾವ್ಯವನ್ನು ವಾಚನ ಮಾಡಲು ಉತ್ಸಾಹ ಹೆಚ್ಚು. ಯಾರು ಎಲ್ಲೇ ಯಾವಾಗ ಕರೆದರೂ ಬಂದು ವಾಚನ ಮಾಡಬಲ್ಲೆ. ಬಿ.ಎಂ.ಶ್ರೀ. ಪ್ರತಿಷ್ಠಾನದವರು ಎಷ್ಟು ಸಾರಿ ಕರೆದರೂ ಬರುವೆ ಎಂದರು.




ಇಂದಿನ ಗಮಕ ವಾಚನ ವಿಷಯ ಸೌಂದರ್ಯ, ವಾಚಕರ ಮಾಧುರ್ಯ ಮತ್ತು ವ್ಯಾಖ್ಯಾನಕಾರರ ಚಾತುರ್ಯದ ತ್ರಿಮೂರ್ತಿ ಸಂಗಮವಾಗಿತ್ತು. ಇಬ್ಬರೂ ಸರಳವಾಗಿ ಮತ್ತು ಸುರಳಿತವಾಗಿ ಗಮಕ ಕಾರ್ಯಕ್ರಮವನ್ನು ನಡೆಸಿಕೊಟ್ಟು ಇಡೀ "ಹರಿಶ್ಚಂದ್ರ ಕಾವ್ಯದ ಮೃಗಯಾ ಪ್ರಸಂಗವು" ಕಣ್ಣ ಮುಂದೆಯೇ ನಡೆಯಿತೇನೋ ಅನ್ನುವಂತೆ ನಡೆಸಿಕೊಟ್ಟು ಸಭಿಕರಿಗೆ ಆನಂದವನ್ನು ಉಂಟುಮಾಡಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಅಧ್ಯಕ್ಷೀಯ ಮಾತುಗಳನ್ನು ಆಡುತ್ತಾ, ಇಂದಿನ ಗಮಕ ಕಾರ್ಯಕ್ರಮ ಒಂದು ಅಪೂರ್ವವಾದದ್ದು. ಅರ್ಥಪೂರ್ಣವಾದದ್ದು. ನಮಗೆ ಶ್ರೀಮತಿ ಗಂಗಮ್ಮ ಕೇಶವಮೂರ್ತಿ ಅಂತಹ ಹೆಸರಾಂತ ಗಮಕಿ ಜೊತೆಗೆ ಸಾಧಕಿ ನಮ್ಮ ಆಹ್ವಾನವನ್ನು ಒಪ್ಪಿಕೊಂಡು ಬಂದು ಉತ್ತಮವಾಗಿ ಕಾರ್ಯಕ್ರಮ ನಡೆಸಿಕೊಟ್ಟದ್ದು ನಮಗೆ ಹೃದಯ ತುಂಬಿ ಬಂದಿದೆ ಎಂದರು.

ವಂದನಾರ್ಪಣೆಯೊಂದಿಗೆ ಗಮಕ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೧೯/೦೧/೨೦೨೬ : ಶ್ರೀಮತಿ ರಂಗನಾಯಕಮ್ಮ ಮತ್ತು ಶ್ರೀ ಜಿ. ಸುಬ್ಬರಾವ್ ಸಂಗೀತ ದತ್ತಿ

**ಸಹಯೋಗ :** ಗಾನಕಲಾಭೂಷಣ ಆನೂರು ಎಸ್. ರಾಮಕೃಷ್ಣ.

**ಭಕ್ತಿ ಸಂಗೀತ ಕಾರ್ಯಕ್ರಮ :** ನಡೆಸಿಕೊಟ್ಟವರು ಶ್ರೀಮತಿ ಶ್ರಾವ್ಯ ಮತ್ತು ತಂಡ.

**ಉಪಸ್ಥಿತಿ:** ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ.

ಮೇಲಿನ ದತ್ತಿಯನ್ನು ಸ್ಥಾಪಿಸಿದವರು ಶ್ರೀಮತಿ ರಂಗನಾಯಕಮ್ಮ ಮತ್ತು ಶ್ರೀ ಜಿ. ಸುಬ್ಬರಾವ್ ಅವರ ಮಗಳಾದ ಶ್ರೀಮತಿ ಸುನಂದ ಅವರು. ಈ ದತ್ತಿಯ ಉದ್ದೇಶ ಪ್ರಾರಂಭದಲ್ಲಿ ಪ್ರಬಂಧಗಳ ರಚನಾ ಸ್ಪರ್ಧೆಯಾಗಿತ್ತು. ಶ್ರೀಮತಿ ಸುನಂದ ಅವರಿಗೆ ಸಂಗೀತದಲ್ಲಿ ಒಲವು ಇದ್ದದ್ದರಿಂದ ಮತ್ತು ಸಂಗೀತ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ, ೨೦೧೫ನೇ ಇಸವಿಯಿಂದ ಈ ದತ್ತಿ ಅಡಿಯಲ್ಲಿ ಸಂಗೀತ ಕಾರ್ಯಕ್ರಮಗಳು ನಡೆಯುತ್ತಾ ಬಂದಿವೆ. ಈ ನಿಟ್ಟಿನಲ್ಲಿ ಇಂದು ಶ್ರೀಮತಿ ಶ್ರಾವ್ಯ ಆಚಾರ್ ಮತ್ತು ಸಂಗಡಿಗರು ಕಾರ್ಯಕ್ರಮ ನಡೆಸಿಕೊಟ್ಟರು.

ಶ್ರಾವ್ಯ ಅವರು ಎಂ.ಬಿ.ಎ. ಪದವೀಧರೆ ಮತ್ತು ಉನ್ನತ ಹುದ್ದೆಯಲ್ಲಿ ಇದ್ದವರು. ತಮ್ಮ ೭ನೇ ವಯಸ್ಸಿನಲ್ಲೇ ಪಂಡಿತ್ ವೆಂಕಟೇಶ್ ಗೋಡ್ಖಿಂಡಿ ಅವರಿಂದ ಸಂಗೀತ ಕಲಿಯಲು ಪ್ರಾರಂಭಿಸಿ, ಮುಂದೆ ಉಸ್ತಾದ್ ಫಯಾಜ ಖಾನ್ ಅವರ ಗರಡಿಯಲ್ಲಿ ತಮ್ಮ ಹೆಚ್ಚಿನ ಸಂಗೀತ ತಾಲೀಮನ್ನು ಮುಂದುವರೆಸಿದರು. ಇವರ ತಂದೆ ತಾಯಿ ಕೂಡ




ಹೆಸರಾಂತ ಗಿಟಾರ್ ಕಲಾವಿದರು. ಸಂಗೀತದ ಮೇಲಿನ ಪ್ರೀತಿ ಹೆಚ್ಚಾಗಿ, ತಮ್ಮ ಹುದ್ದೆಯನ್ನು ತ್ಯಜಿಸಿ, ಸಂಗೀತ ಸೇವೆಯಲ್ಲೇ ಶ್ರೀಮತಿ ಶ್ರಾವ್ಯ ನಿರತರಾಗಿದ್ದಾರೆ. "ಸ್ವರಾಗಿನಿ" ಹೆಸರಿನಲ್ಲಿ ತಮ್ಮದೇ ಆದ ಸಂಗೀತ ಶಾಲೆಯನ್ನು ನಡೆಸುತ್ತಿದ್ದಾರೆ.

ಶ್ರಾವ್ಯ ಅವರ ಜೊತೆ ಹಾರ್ಮೋನಿಯಂ ನುಡಿಸಿದವರು ಶ್ರೀಯುತ ಬಿ.ಕೆ. ಚಿನ್ಮಯ್ ಭಾರದ್ವಾಜ್. ಪಿ.ಯು.ಸಿ. ಓದುತ್ತಿರುವ ಇವರು ಬಹುಮುಖ ಪ್ರತಿಭೆ. ನವನೀತ ಶ್ಯಾಮ್ ಅವರ ಬಳಿ ಸಂಗೀತ ಕಲಿಯುತ್ತಾ, ಶ್ರೀಮತಿ ಉಷಾ ಪ್ರಕಾಶ್ ಅವರ ಹತ್ತಿರ ಕರ್ನಾಟಕ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ. ಜೊತೆಗೆ ಪಂಡಿತ್ ಪ್ರವೀಣ ಗೋಡ್ಖಿಂಡಿ ಅವರ ಅಡಿಯಲ್ಲಿ ಕೊಳಲು ನುಡಿಸುವುದನ್ನು ಕಲಿಯುತ್ತಾ,

ಕಿರಣ್ ಗೋಡ್ಕಿಂಡಿ ಅವರ ಅಡಿಯಲ್ಲಿ ತಬಲಾ ವಾದನವನ್ನೂ ಅಭ್ಯಾಸ ಮಾಡುತ್ತಿದ್ದಾರೆ.

ಇಂದಿನ ಸಂಗೀತ ಕಾರ್ಯಕ್ರಮದಲ್ಲಿ ತಬಲಾ ವಾದನ ಬಾಬಾ ಪ್ರಹ್ಲಾದ ಪೈ ಅವರದು. ಇವರು ವಿದ್ವಾನ್ ಶೇಷಾದ್ರಿ ಅಯ್ಯಂಗಾರ್, ಪಂಡಿತ್ ರವಿಕಿರಣ್ ನಾಕೋಡ್ ಮತ್ತು ವಿದ್ವಾನ್ ಅನಂತಕೃಷ್ಣಶರ್ಮ ಅವರುಗಳ ಶಿಷ್ಯರು. ಇನ್ಫೋಸಿಸ್ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಾ ಸಂಗೀತ ಸೇವೆಯಲ್ಲೂ ತೊಡಗಿಸಿಕೊಂಡಿದ್ದಾರೆ.

ಹೀಗೆ ಇಂದಿನ ಸಂಗೀತ ಕಾರ್ಯಕ್ರಮ ನೀಡುವ ತ್ರಯರನ್ನೂ ಮತ್ತು ದತ್ತಿಯ ಬಗ್ಗೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತ ಲಿಪಿ ಸಂರಕ್ಷಕಾರದ ಶ್ರೀ ಬಿ.ಎಸ್. ಗುರುಪ್ರಸಾದ್ ಪರಿಚಯಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಕಲಾವಿದರನ್ನು ಮತ್ತು ಶ್ರೋತೃಗಳನ್ನು ಸ್ವಾಗತಿಸಿದರು.

ಶ್ರೀ ಗಣೇಶನ ಪ್ರಾರ್ಥನೆಯೊಂದಿಗೆ ಗೀತೆಗಳ ಗಾಯನ ಪ್ರಾರಂಭವಾಯಿತು. ನಂತರ ತಿಮ್ಮಪ್ಪ, ಕೆ.ಎಸ್. ನರಸಿಂಹಾಸ್ವಾಮಿ ರಚಿಸಿದ ಭಾವಗೀತೆ “ದೀಪವು ನಿನ್ನದೇ ..”, ದ.ರಾ. ಬೇಂದ್ರೆ ರಚಿಸಿದ “ಮುಗಿಲ ಮಾಳಿಗೆ..”, “ಘಮ ಘಮ ಘಮಾಡಿಸ್ತಾವು ಮಲ್ಲಿಗಿ.....” ಮುಂತಾದ ಅನೇಕ ಭಕ್ತಿ ಮತ್ತು ಭಾವ ಗೀತೆಗಳನ್ನು ತಮ್ಮ ಮಧುರ ಕಂಠದಿಂದ ಹಾಡಿ ನೆರೆದಿದ್ದ ಮತ್ತು ಅಂತರ್ಜಾಲದ ಶ್ರೋತೃಗಳನ್ನು ರಂಜಿಸಿದರು. ಹಾರ್ಮೋನಿಯಂ ಮತ್ತು ತಬಲಾ ಗಾಯನಕ್ಕೆ ತಕ್ಕಂತೆ ಮೇಳವಾಗಿತ್ತು. ಒಟ್ಟಿನಲ್ಲಿ ಈ ಸಂಜೆ ಸುಮಧುರ ಸಂಗೀತದಲ್ಲಿ ಸುಂದರ ಹೂವಿನ ಜೊತೆ ಪಸರಿಸುವ ಸುಗಂಧ ಭರಿತದ ಆಹ್ಲಾದವನ್ನು ಉಣಿಸಿತ್ತು.

ಅಧ್ಯಕ್ಷೀಯ ಮಾತುಗಳನ್ನಾಡುತ್ತಾ, ಡಾ.ಬೈರಮಂಗಲ ರಾಮೇಗೌಡ ಅವರು, ಇಂದು ಶ್ರೀಮತಿ ಶ್ರಾವ್ಯ, ಚಿನ್ಮಯ್ ಮತ್ತು ಪ್ರಹ್ಲಾದ ಪೈ ಈ ಮೂವರೂ ತಮ್ಮ ಸಂಗೀತದ ಕಲೆಯಿಂದ ನಮ್ಮನ್ನೆಲ್ಲ ಭವ್ಯತೆಯ ಗಡಿಯಿಂದ ದಿವ್ಯತೆಯ ಕಡೆಗೆ ಕರೆದೊಯ್ದಿದ್ದಾರೆ. ಈ ತ್ರಯಿಗಳ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸುತ್ತೇನೆ. ಶ್ರಾವ್ಯ ಸಂಗೀತ ಶಾಲೆಯನ್ನೂ ನಡೆಸುತ್ತಿದ್ದಾರೆ. ಅವರ ಕಂಠ ಎಷ್ಟು ಪರಿಪಕ್ವವಾಗಿದೆ ಎಂಬುದು, ಅವರು ಪ್ರಾರಂಭದಲ್ಲಿ ಹಾಡಿದ ಸ್ವರ ಪ್ರಸ್ತಾರವೇ ಸಾಕ್ಷಿ. ಇಂದಿನ ಅನೇಕ ತಂದೆ ತಾಯಿಗಳು ತಮ್ಮ ಮಕ್ಕಳೂ ಸಂಗೀತ ಕಲಿಯಲಿ ಎಂಬ ಅಪೇಕ್ಷೆಯೊಂದಿಗೆ ಸಂಗೀತ ಶಾಲೆಗಳಿಗೆ ಕಳಿಸುತ್ತಿದ್ದಾರೆ. ಆದರೆ ಅವರೆಲ್ಲರ ಆಸೆ, ತಮ್ಮ ಮಕ್ಕಳು ಬೇಗ ಕಲಿತು, ಬಹುಬೇಗ ದೃಶ್ಯ ಮಾಧ್ಯಮದಲ್ಲಿ ಬೆಳಗಲಿ ಎಂಬುದು. ಹೀಗೆ ಒಂದು ಕಡೆಯಾದರೆ, ಸಂಗೀತ ಕಲಿಸುವವರ ದೃಷ್ಟಿಕೋನವೇ ಬೇರೆ. ಅವರಿಗೆ ಸಂಗೀತ ಕಲಿಸುವುದು ದೈವ ಸಾಕ್ಷಾತ್ಕಾರದ ಅನುಭವ. ಸುಶ್ರಾವ್ಯ ಸಂಗೀತದ ಲಕ್ಷಣವೆಂದರೆ, ರಾಗದ ಜೊತೆಗೆ ಸ್ವಚ್ಛ ಪದಗಳ ಉಚ್ಚಾರ ಮಾಡುತ್ತಾ ಸ್ವತಃ ತಾವು ಮತ್ತು ಶ್ರೋತೃಗಳನ್ನು ಪರವಶರನ್ನಾಗಿ ಮಾಡಿ ಯಾವುದೋ ತಲ್ಲೀನತೆಯ ಲೋಕಕ್ಕೆ ಕರೆದೊಯ್ಯುವ ಶಕ್ತಿ. ಇಂದು ಶ್ರಾವ್ಯ ಮತ್ತು ಸಂಗಡಿಗರು, ನಮಗೆಲ್ಲಾ ರಸಮಯವಾದ ಸಂಗೀತದ ಅನುಭೂತಿಯನ್ನು ಉಂಟುಮಾಡಿದ್ದಾರೆ ಎನ್ನುತ್ತಾ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಶ್ರೀ ಬಿ.ಎಸ್. ಗುರುಪ್ರಸಾದ್ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ‘ರಾಷ್ಟ್ರಮಟ್ಟದಲ್ಲಿ ರಾರಾಜಿಸುತ್ತಿರುವ ಬಿ.ಎಂ.ಶ್ರೀ. ಪ್ರತಿಷ್ಠಾನ’



ಬಿ.ಎಂ.ಶ್ರೀ. ಪ್ರತಿಷ್ಠಾನ ಈಗ ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿದೆ. ಪ್ರತಿಷ್ಠಾನದ ತಿಮ್ಮಪ್ಪದಾಸ ಪ್ರಾಚೀನ ಹಸ್ತಪ್ರತಿ ಸಂಗ್ರಹಾಲಯದ ‘ಅಧ್ಯಾತ್ಮರಾಮಾಯಣ’ ಹಸ್ತಪ್ರತಿ ದೆಹಲಿಯ ರಾಷ್ಟ್ರಪತಿ ಭವನದ ‘ಗ್ರಂಥಕುಟೀರ’ದಲ್ಲಿ ಶಾಶ್ವತ ಪ್ರದರ್ಶನಕ್ಕೆ ಆಯ್ಕೆಯಾಗಿದೆ. ಈ ಸಂಬಂಧ ದಿನಾಂಕ ೨೩.೦೧.೨೦೨೬ರಂದು ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಅಧ್ಯಕ್ಷರ ಪರವಾಗಿ ಹಸ್ತಪ್ರತಿ ಸಂರಕ್ಷರಾದ ಶ್ರೀ ಬಿ.ಎಸ್. ಗುರುಪ್ರಸಾದ್, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಸ್ಮರಣಿಕೆಯನ್ನು ಸ್ವೀಕರಿಸಿದರು.

# ದಿನಾಂಕ ೨೫/೦೧/೨೦೨೬ : ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ದತ್ತಿ ಹಾಗೂ ಸಂಗೀತ ಸರಸ್ವತಿ ಶ್ರೀ ಪಿಟೀಲು ಚೌಡಯ್ಯ ದತ್ತಿ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ 'ಪಿಟೀಲು ವಾದನ ಮತ್ತು ಭಕ್ತಿಗೀತೆ ಗಾಯನ ಸ್ಪರ್ಧೆ'

೧೦ ರಿಂದ ೧೬ ವಯಸ್ಸಿನ ಮಕ್ಕಳಿಗಾಗಿ ಪಿಟೀಲು ವಾದನ ಮತ್ತು ಭಕ್ತಿಗೀತೆ ಗಾಯನ ಸ್ಪರ್ಧೆಗಳು ಬಿ.ಎಂ.ಶ್ರೀ. ಪ್ರತಿಷ್ಠಾನದ ಎಂ.ವಿ.ಸೀ. ಸಭಾಭವನದಲ್ಲಿ ನಡೆಯಿತು. ಇದರ ಉದ್ಘಾಟನೆಯನ್ನು ಬೆಂಗಳೂರು ಗಾಯನ ಸಮಾಜದ ಧರ್ಮದರ್ಶಿಗಳು ಹಾಗೂ ಮಕ್ಕಳಕೂಟದ ಗೌರವಾಧ್ಯಕ್ಷರೂ ಆದ ಶ್ರೀ ಕೆ. ಮೋಹನ್‌ದೇವ್ ಆಳ್ವ ಅವರು ಉದ್ಘಾಟಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ಸಂಯುಕ್ತ ದತ್ತಿಗಳ ಸ್ಥಾಪನೆಯ ಉದ್ದೇಶ ಮತ್ತು ಈ ಹಿಂದೆ ನಡೆದ ಕಾರ್ಯಕ್ರಮಗಳ ಒಂದು ಪಕ್ಷಿನೋಟವನ್ನು ನೀಡುತ್ತಾ ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಹಾಗೇ, ಅತಿಥಿಗಳಾದ ಶ್ರೀ ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ ವಹಿಸಿದ್ದ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ, ಉಪಸ್ಥಿತರಿದ್ದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು, ತೀರ್ಪುಗಾರರರನ್ನು ಹಾಗೂ ಸ್ಪರ್ಧಿಗಳನ್ನು ಸ್ವಾಗತಿಸಿದರು.

ಕುಮಾರಿ ಹೃದ್ಯ ಅವರ 'ಸರಸೀರುಹಾಸನ ಪ್ರಿಯೆ ...' ಪ್ರಾರ್ಥನೆಯೊಂದಿಗೆ ಸ್ಪರ್ಧೆಗಳಿಗೆ ಚಾಲನೆ ನೀಡಲಾಯಿತು.

ನಂತರ ವೇದಿಕೆಯ ಗಣ್ಯರು ಸಾಮೂಹಿಕವಾಗಿ ಜ್ಯೋತಿ ಬೆಳಗಿದರು.

ಅತಿಥಿಗಳಾದ ಶ್ರೀ ಕೆ. ಮೋಹನ್‌ದೇವ್ ಆಳ್ವ ಮಾತನಾಡುತ್ತಾ ಸಮಾಜದ ಸಾಹಿತ್ಯ, ಸಂಗೀತ, ಕಲೆ ಬೆಳೆಯಬೇಕಾದರೆ ಮಕ್ಕಳಿಗೆ ಮತ್ತು ಯುವಕರಿಗೆ ಪ್ರೋತ್ಸಾಹ ನೀಡುವುದು ಬಹು ಮುಖ್ಯ. ಜೊತೆಗೆ, ಈ ಹಿಂದೆ ಮೇಲಿನ ಕ್ಷೇತ್ರಗಳಲ್ಲಿ ತಮ್ಮ ಜೀವನವನ್ನು ಸಮರ್ಪಿಸಿಕೊಂಡು ಹೆಸರು ಮಾಡಿರುವ ಮತ್ತು ಮುಂದಿನ ಪೀಳಿಗೆಗೆ ದಾರಿದೀಪವಾಗಿರುವ ಕಲಾವಿದರು ಪ್ರಾತಃಸ್ಮರಣೀಯರು. ಈ ಕಾರಣದಿಂದ ಇಂತಹ ದತ್ತಿಗಳನ್ನು ಸ್ಥಾಪಿಸಲಾಗಿದೆ. ಮಕ್ಕಳು ಮತ್ತು ಯುವಪೀಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಇಂತಹ ಸ್ಪರ್ಧೆಗಳು ಬಹುಮಾನ ಪಡೆಯುವುದಕ್ಕಿಂತ ಮಿಗಿಲಾಗಿ, ತಮ್ಮ ಕಲಿಕೆ ಯಾವ ಮಟ್ಟದಲ್ಲಿದೆ ಎಂದು ಗುರುತಿಸಿಕೊಂಡು ಇನ್ನೂ ಪ್ರತಿಭಾವಂತರಾಗಿ ಬೆಳೆಯಲು ಉಪಯುಕ್ತ ವೇದಿಕೆ ಎಂದರು.

ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವ ವಿದ್ವಾನ್ ವೇಣುಗೋಪಾಲ್ ಅವರು ಉಪಸ್ಥಿತರಿದ್ದು ಸ್ಪರ್ಧೆಯ ಕೆಲವು ನಿಯಮಗಳನ್ನು ವಿವರಿಸಿದರು.

ಇಂದಿನ ಸ್ಪರ್ಧೆಗಳಲ್ಲಿ ಪಿಟೀಲು ವಾದನ ವಿಭಾಗದಲ್ಲಿ ೭ ಸ್ಪರ್ಧಿಗಳು ಮತ್ತು ಭಕ್ತಿಗೀತೆ ಗಾಯನ ವಿಭಾಗದಲ್ಲಿ ೩೪ ಸ್ಪರ್ಧಿಗಳು ಭಾಗವಹಿಸಿದ್ದರು.

ಬಹುಮಾನ ಸಮಾರಂಭದ ಸಮಯದಲ್ಲಿ ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಅವರು ಮೆಚ್ಚುಗೆ ವ್ಯಕ್ತಪಡಿಸಿ, ಕೆಲವು ಸಮಂಜಸ ಹಿತನುಡಿಗಳನ್ನು ಸ್ಪರ್ಧಾಳುಗಳಿಗೆ ಮನಮುಟ್ಟುವಂತೆ ಹೇಳಿದರು.

ತೀರ್ಪುಗಾರರು ಬಹುಮಾನ ವಿತರಣೆಗೆ ಮುನ್ನ ತಾವು ಸ್ಪರ್ಧೆಗಳ ಸಮಯದಲ್ಲಿ ಕಂಡ ಕೆಲವು ಕೊರತೆಗಳನ್ನು ಉಲ್ಲೇಖಿಸಿ, ಸ್ಪರ್ಧಿಗಳು ಯಾವ ರೀತಿ ಇವುಗಳನ್ನು ತಿದ್ದಿಕೊಂಡು ತಮ್ಮ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬಹುದು ಎಂದು ವಿವರಿಸಿದರು.

ಇಂದಿನ ಎರಡೂ ವಿಭಾಗಗಳಲ್ಲಿ ಕೆಳಕಂಡವರು ಬಹುಮಾನ ಪಡೆದರು:

**ಪಿಟೀಲು ವಾದನ:**

ಪ್ರಥಮ ಬಹುಮಾನ: ಅನಿತಾ ಶಾಸ್ತ್ರೀ – ೪,೦೦೦/–
ದ್ವಿತೀಯ ಬಹುಮಾನ: ಸಹನಾ – ೩,೦೦೦/–
ತೃತೀಯ ಬಹುಮಾನ: ಹರ್ಷಿತಾ ಪ್ರದೀಪ್ – ೨,೦೦೦/–

**ಭಕ್ತಿಗೀತೆಗಳ ವಿಭಾಗ:**

ಪ್ರಥಮ ಬಹುಮಾನ: ಭುವನ ಎ. – ೩,೦೦೦/–
ದ್ವಿತೀಯ ಬಹುಮಾನ: ಶ್ರೀನಿಧಿ ತಾಯೂರು – ೨,೦೦೦/–
ತೃತೀಯ ಬಹುಮಾನ: ರಾಘವೇಶ ಬಿ. – ೧,೦೦೦/–
ತೃತೀಯ ಬಹುಮಾನ: ಹೃದ್ಯ ಮಿತ್ತೂರ್ – ೧,೦೦೦/–

ಪಿಟೀಲು ವಾದನ ಸ್ಪರ್ಧೆಗೆ ವಿದ್ವಾನ್ ಜೆ.ಕೆ. ಶ್ರೀಧರ್ ಮತ್ತು ವಿದ್ವಾನ್ ಕೆ.ಎಸ್. ವಾಸುಕಿಯವರು ಹಾಗೂ ಭಕ್ತಿ ಗೀತೆಗಳ ಸ್ಪರ್ಧೆಗೆ ಶ್ರೀಮತಿ ಇಂದಿರಾ ಶರ್ಮ ಮತ್ತು ಶ್ರೀಮತಿ ಸುಮನ ಪ್ರಸಾದ್ ಅವರು ತೀರ್ಪುಗಾರರಾಗಿದ್ದರು.

ಡಾ.ಶಾಂತರಾಜು ಅವರಿಂದ ವಂದನಾರ್ಪಣೆ ಆಯಿತು. ಎಲ್ಲರಿಗೂ ದತ್ತಿ ದಾನಿಗಳು ಸ್ವಾದಿಷ್ಟ ಭೋಜನದ ವ್ಯವಸ್ಥೆ ಮಾಡಿದ್ದರು.





HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 31-01-2026

# ಪ್ರಸ್ತುತ ತಿಂಗಳ ಅಂಗಳ

(ಸೂಚನೆ: ಸಂದರ್ಭಾನುಸಾರ ಕೆಲವು ಕಾರ್ಯಕ್ರಮಗಳ ದಿನಾಂಕ ಬದಲಾಗಬಹುದು.
ಯಾವುದಕ್ಕೂ ಬಿ.ಎಂ.ಶ್ರೀ. ಪ್ರತಿಷ್ಠಾನ ವಾಟ್ಸಾಪ್ ಗುಂಪಿನಲ್ಲಿ ಕಳುಹಿಸುವ ಆಹ್ವಾನ ಪತ್ರಿಕೆಯನ್ನು ನೋಡಿ.)

**೦೭.೦೨.೨೦೨೬ ಶನಿವಾರ ಸಂಜೆ ೫.೦೦ ಗಂಟೆಗೆ**
ಎಂ.ಎ. ಜಯಚಂದ್ರ ದತ್ತಿ ಉಪನ್ಯಾಸ
ವಿಷಯ: ಜೈನ ಸಾಹಿತ್ಯ– 'ಯಶೋಧರ ಚರಿತೆ' ಕುರಿತು
ವಿಚಾರ ಮಂಡನೆ: ಪ್ರೊ. ಎಸ್.ಪಿ. ಅಜಿತ್ ಪ್ರಸಾದ್
ನಿವೃತ್ತ ಕನ್ನಡ ಪ್ರಾಧ್ಯಾಪಕರು

**೧೪.೦೨.೨೦೨೬ ಶನಿವಾರ ಸಂಜೆ ೫.೦೦ ಗಂಟೆಗೆ**
ಪಂಡಿತ್ ಓ.ಆರ್.ರಾಮಣ್ಣ ಶ್ರೀಮತಿ ಪುಟ್ಟಮ್ಮ ದತ್ತಿ ಉಪನ್ಯಾಸ
ವಿಷಯ: ಜೈಮಿನಿ ಭಾರತ
ವಿಚಾರ ಮಂಡನೆ: ಡಾ. ಶಿವಾನಂದ ಟವಳಿ, ಪ್ರಾಧ್ಯಾಪಕರು, ಕ್ರೈಸ್ಟ್ ಕಾಲೇಜು

**೧೫.೦೨.೨೦೨೬ ಭಾನುವಾರ ಬೆಳಗ್ಗೆ ೧೦.೦೦ ಗಂಟೆಗೆ**
ಶ್ರೀ ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ.ಶೈಲಜಾ ಆಳ್ವ ಅವರು ಸ್ಥಾಪಿಸಿರುವ ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್ ದತ್ತಿಯ ನೃತ್ಯ ಸ್ಪರ್ಧೆ
೧೦ ರಿಂದ ೧೬ ವರ್ಷ ವಯಸ್ಸಿನ ಮಕ್ಕಳಿಗಾಗಿ ಭರತನಾಟ್ಯ ಸ್ಪರ್ಧೆ

**೧೯.೦೨.೨೦೨೬ ಗುರುವಾರ ಸಂಜೆ ೫.೦೦ ಗಂಟೆಗೆ**
ಆ.ನೇ.ಉಪಾಧ್ಯೆ–ಡಿ.ಎಲ್.ಎನ್.–ಎಂ.ಜಿ.ನಂಜುಂಡಾರಾಧ್ಯ–ಸೋಸಲೆ ಅಯ್ಯಾಶಾಸ್ತ್ರೀ ಸಂಯೋಜಿತ ದತ್ತಿ
ವಿಚಾರ ಮಂಡನೆ: ಡಾ. ಎನ್.ಆರ್.ಲಲಿತಾಂಬ, ನಿವೃತ್ತ ಕನ್ನಡ ಪ್ರಾಧ್ಯಾಪಕರು
ವಿಷಯ: ಆ.ನೇ.ಉಪಾಧ್ಯೆ ಅವರ ಸಾಹಿತ್ಯ

**೨೧.೦೨.೨೦೨೬ ಶನಿವಾರ ಸಂಜೆ ೫.೦೦ ಗಂಟೆಗೆ**
ಶ್ರೀಮತಿ ಎಲ್. ನಾಗಮಣಿ ಆರ್. ಲಕ್ಷ್ಮೀನಾರಾಯಣ ದತ್ತಿ (ಸಂಗೀತ)
ಶಾಸ್ತ್ರೀಯ ಸಂಗೀತ ಕಾರ್ಯಕ್ರಮ
ನಡೆಸಿಕೊಡುವವರು: ಪ್ರಬೋಧ್ ಮತ್ತು ಸಂಗಡಿಗರು

**೨೭.೦೨.೨೦೨೬ ಶುಕ್ರವಾರ ಸಂಜೆ ೫.೦೦ ಗಂಟೆಗೆ**
ಕೋಚೆ ನೆನಪಿನ ದತ್ತಿ
ವಿಚಾರ ಮಂಡನೆ: ಶ್ರೀ ಟಿ.ಎಸ್. ದಕ್ಷಿಣಾಮೂರ್ತಿ
ನಿವೃತ್ತ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ವಿಷಯ: ಅನುವಾದಕರಾಗಿ ಕೋಚೆ

**೨೮.೦೨.೨೦೨೬ ಶನಿವಾರ ಬಳಗ್ಗೆ ೧೦.೩೦ ಗಂಟೆಗೆ**
ಪ್ರೊ. ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ ಮತ್ತು ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭



ಮುಂದುವರೆದ ಭಾಗ...

## ಬಿ.ಎಂ.ಶ್ರೀಕಂಠಯ್ಯ
## ೯. ಭಾಷಣ ಮೀಮಾಂಸೆ

ಡಾ. ರಾಮೇಗೌಡ (ರಾಗೌ)

(ಮುಂದುವರೆಯುವುದು)